**International Journal of Humanities and Social Science Research**
**ISSN: 2455-2070; Impact Factor: RJIF 5.22**
**www.socialresearchjournals.com**
**Volume 3; Issue 2; February 2017; Page No. 99-102**

# ಕನ್ನಡ ಲಾವಣಿ ಸಾಹಿತ್ಯದಲ್ಲಿ ಟಿಪ್ಪುವಿನ ಯುದ್ಧಗಳ ವರ್ಣನೆ

**ಡಾ. ಕಾವ್ಯಶ್ರೀ.ಜಿ.**

ಎಂ.ಎ., ಎಂ.ಫಿಲ್.,ಪಿಹೆಚ್.ಡಿ, ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ

**Abstract**
ಸತ್ಯಂ ಶಿವಂ ಸುಂದರಂ ಎಂಬಂತೆ ಸತ್ಯವೇ ಶಿವ ಶಿವನೇ ಸುಂದರ. ಸತ್ಯಕ್ಕೆ ಸಾವಿಲ್ಲ, ಸತ್ಯದಂತೆಯೇ ಸೌಂದರ್ಯ, ಅದಕ್ಕೂ ಸಾವಿಲ್ಲ. ಸತ್ಯ–ಸೌಂದರ್ಯದಂತೆಯೇ ಸಾಹಿತ್ಯ. ಸಾಹಿತ್ಯ ಸಂತೋಷವನ್ನುಂಟು ಮಾಡುವುದರೊಂದಿಗೆ ಸಮಾಜವನ್ನು ಯಥಾವತ್ತಾಗಿ ಬಿಂಬಿಸುವ ಕೆಲಸವನ್ನು ಮಾಡುತ್ತದೆ. ಸಾಹಿತ್ಯವಿಲ್ಲದ ಜೀವನವಿಲ್ಲ, ಸುಂದರವಾಗಿ ರಮಣೀಯವಾದ ಶಬ್ದ ಅರ್ಥಗಳಿಂದ ವಿವರಿಸುವುದೇ ಸಾಹಿತ್ಯ. ಇಂಥ ಸಾಹಿತ್ಯವೇ ಸುಖಕರ. ಜನಪದರ ಬಾಯಿಂದ ಬಾಯಿಗೆ; ಕಿವಿಯಿಂದ ಕಿವಿಗೆ ಹರಿದು ಸಾಗಿ ಬಂದುದೇ ಜನಪದ ಸಾಹಿತ್ಯ. ಇದು ಮೌಖಿಕ. ಅನಕ್ಷರಸ್ತರ ಅನುಭವಕ್ಕೆ ಬಂದದ್ದು, ಅವರು ಅನುಭವಿಸಿದ್ದು, ಕಂಡಿದ್ದು ಕೇಳಿದ್ದು ಹೀಗೆ ಎಲ್ಲವನ್ನು ಅವರು ತಮ್ಮದೇ ಆದ ಧಾಟಿಯಲ್ಲಿ ಹಾಡುತ್ತ, ಹೇಳುತ್ತ ಸಾಗಿದ್ದಿದೆ. ವಾಸ್ತವಿಕ ನೆಲೆಗಟ್ಟಿನ ಮೇಲೆ ಯಾವುದೇ ಉತ್ಪ್ರೇಕ್ಷೆಯಿಲ್ಲದೇ ಸರಳ ಸುಂದರವಾಗಿ ಅಭಿವ್ಯಕ್ತವಾಗುವಂಥದ್ದು. ಹಳ್ಳಿಯ ಜನರ ಬಲ ದೌರ್ಬಲ್ಯಗಳೊಂದಿಗೆ ಅವರ ಮುಗ್ಧತೆ, ಸರಳತೆಯೊಂದಿಗೆ ಸತ್ಯವನ್ನು ಅನಾವರಣಗೊಳಿಸುವ ಶಕ್ತಿ ಇವರ ಹಾಡುಗಳಲ್ಲಿದೆ. ಜನಪದ ಹಾಡುಗಳಲ್ಲಿ ಲಾವಣಿ ಒಂದು ಪ್ರಮುಖ ವಿಧ. ವಸ್ತು, ಶೈಲಿ, ತಂತ್ರಗಳಲ್ಲಿ ಅದು ಜಾನಪದೀಯ. ಲಾವಣಿಯು ಯಾವಾಗಲೂ ಒಂದೇ ವಸ್ತುವಿನ ಮೇಲೆ ಕೇಂದ್ರೀಕೃತವಾಗಿರುತ್ತದೆ. ಅದರ ಕಥನಗತಿ ವೇಗವಾಗಿ ಸಂಭಾಷಣೆಗಳ ಮೂಲಕ ಮುಕ್ತಾಯಗೊಳ್ಳುತ್ತದೆ. ಇದು ನಾಟಕೀಯವಾಗಿಯೂ ಕಂಡು ಬರುತ್ತದೆ. ಇಂಥ ಲಾವಣಿಗಳು ಸಾಮೂಹಿಕ ಸೃಷ್ಟಿಯಾದರೂ ಒಬ್ಬ ನಾಯಕನ ನೇತೃತ್ವದಲ್ಲಿ ಉಂಟಾದ ರಚನೆ. ಇದು ತೀರಾ ಪ್ರಾಚೀನದ್ದಲ್ಲ. ಮಧ್ಯಕಾಲೀನ ಕಲಾತ್ಮಕವಾದ ಸಾಹಿತ್ಯ ರೂಪ. ಸಂಗೀತವೂ ಇದರೊಂದಿಗೆ ಮೇಳೈಸಿದೆ.

**Keywords:** ಕಲಾತ್ಮಕ, ಸಾಮ್ರಾಜ್ಯಶಾಹಿ, ಬೇಷಕ್ ತಮಾಷಾ, ಬೀಳಿನ ಹಾಡು, ಸೋಜರ ಕತ್ತು

## Introduction

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಲಾವಣಿ ಸಾಹಿತ್ಯ ಒಂದು ಛಂದದ ಪ್ರಕಾರ. ಜನಪದ ಹಾಡುಗಳಲ್ಲಿ ಲಾವಣಿ ಒಂದು ಪ್ರಮುಖ ವಿಧ. Ballad ಎಂಬ ಅರ್ಥದಲ್ಲಿ ಇದನ್ನು ಬಳಸಲಾಗಿದೆ. ಆಕ್ಸ್‌ಫರ್ಡ್ ಆಂಗ್ಲ ಅರ್ಥಕೋಶದಲ್ಲಿ "a simple, spirited poem in short stanzas, narrating some popular story" ಎಂದು ವಿವರಿಸಿದೆ. ಆದರೆ ಇದು ಸಂಕುಚಿತವಾದ ಅರ್ಥವಾಗಿ ಲಾವಣಿಯ ನೈಜ ರೂಪವನ್ನು ಹೇಳುವುದಿಲ್ಲ. ಲಾವಣಿಯ ನಿರೂಪಣೆ ಕಥೆಯ ರೂಪದಲ್ಲಿದ್ದರೂ ಹಾಡಲು ಬರುವಂಥದ್ದು. ವಸ್ತು, ಶೈಲಿ, ತಂತ್ರಗಳಲ್ಲಿ ಅದು ಜಾನಪದೀಯ. ಲಾವಣಿಯು ಯಾವಾಗಲೂ ಒಂದೇ ವಸ್ತುವಿನ ಮೇಲೆ ಕೇಂದ್ರೀಕೃತವಾಗಿರುತ್ತದೆ. ಅದರ ಕಥನಗತಿ ವೇಗವಾಗಿ ಸಂಭಾಷಣೆಗಳ ಮೂಲಕ ಮುಕ್ತಾಯಗೊಳ್ಳುತ್ತದೆ. ಇದು ನಾಟಕೀಯವಾಗಿಯೂ ಕಂಡು ಬರುತ್ತದೆ. ಇಂಥ ಲಾವಣಿಗಳು ಸಾಮೂಹಿಕ ಸೃಷ್ಟಿಯಾದರೂ ಒಬ್ಬ ನಾಯಕನ ನೇತೃತ್ವದಲ್ಲಿ ಉಂಟಾದ ರಚನೆ. ಇದು ತೀರಾ ಪ್ರಾಚೀನದ್ದಲ್ಲ. ಮಧ್ಯಕಾಲೀನ ಕಲಾತ್ಮಕವಾದ ಸಾಹಿತ್ಯ ರೂಪ. ಸಂಗೀತವೂ ಇದರೊಂದಿಗೆ ಮೇಳೈಸಿದೆ. ಕಾಲದಿಂದ ಕಾಲಕ್ಕೆ ಇವು ಬಾಯಿಂದ ಬಾಯಿಗೆ ಪಸರಿಸಿ ಹಿಗ್ಗಿ ಬೆಳೆದು ಬದಲಾದವು. ರಷ್ಯಾ, ಚೀನಾದಂಥ ದೇಶಗಳಲ್ಲಿ ಲಾವಣಿ ಅತ್ಯಂತ ಸಮರ್ಪಕವಾದ ಪ್ರಸಾರ ಸಾಧನ. ಇವುಗಳಲ್ಲಿ ಪೌರಾಣಿಕ, ಚಾರಿತ್ರಿಕ, ವಾಸ್ತವಿಕ ಘಟನೆಗಳು ಕುತೂಹಲಕಾರಿಯಾಗಿ ಮೂಡಿ ಬಂದಿವೆ. ಈ ಲಾವಣಿಗಳು ರಾಜಕೀಯ, ಸಾಮಾಜಿಕ, ಚಾರಿತ್ರಿಕ ವಿಷಯಗಳ ಕುರಿತಾದ ಕೆಲವು ಸತ್ಯ ಸಂಗತಿಯನ್ನು ನಿರೂಪಿಸುತ್ತವೆ.

ಮೈಸೂರಿನ ಇತಿಹಾಸದಲ್ಲಿ ಹೈದರ್ ಮತ್ತು ಟಿಪ್ಪುವಿನದು ವಿಶೇಷವಾದ ಅಧ್ಯಾಯ. ಟಿಪ್ಪುವಿನ ಕುರಿತಾದ ಚಾರಿತ್ರಿಕ ದಾಖಲೆಗಳಲ್ಲಿ ಅಲಿಖಿತ ಜಾನಪದ ದಾಖಲೆಗಳು ಮುಖ್ಯ ಎನಿಸುತ್ತದೆ. ಅವುಗಳಲ್ಲಿ ಜಾನಪದ ಕಥೆಗಳು ಮತ್ತು ಲಾವಣಿಗಳು ಟಿಪ್ಪುವಿನ ಬಗೆಗೆ ವಿಶೇಷವಾದ ಮಾಹಿತಿಯನ್ನು ಒದಗಿಸುತ್ತವೆ. ಟಿಪ್ಪುವಿನ ಕುರಿತ ಲಾವಣಿಗಳ ಜಾಡು ಹಿಡಿದು ಹೊರಟಾಗ ಅವನ ವ್ಯಕ್ತಿತ್ವ, ಅವನ ಆಡಳಿತ ವೈಖರಿ, ಅವನು ಹೋರಾಡಿದ ಯುದ್ದಗಳು ಇನ್ನು ಮುಂತಾದ ಸಂಗತಿಗಳು ಗಮನಕ್ಕೆ ಬರುತ್ತವೆ. ಹಾಗೆ ನೋಡಿದರೆ ನಮ್ಮ ಇತಿಹಾಸದಲ್ಲಿ ಟಿಪ್ಪು ಸಮರ್ಥ ನಾಯಕನೇ ಅಥವಾ ಖಳ ನಾಯಕನೇ ಎಂಬ ಬಗ್ಗೆ ಚರಿತ್ರಕಾರರಲ್ಲಿ ಒಮ್ಮತವಿಲ್ಲ. ಅವನೊಬ್ಬ ದುಷ್ಟ ರಾಕ್ಷಸನೆಂದು ಕೆಲವರು ಚಿತ್ರಿಸಿದರೆ, ಇನ್ನು ಕೆಲವರು ಆತನೊಬ್ಬ ರಾಷ್ಟ್ರೀಯವಾದಿ, ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದನೆಂದು ಬರೆದಿರುವುದುಂಟು. ಈ ಎಲ್ಲ ಚರ್ಚೆಗಳನ್ನು ಒತ್ತಟ್ಟಿಗಿಟ್ಟು ನೋಡುತ್ತ ಹೊರಟಾಗ ಮೊದಲು ಟಿಪ್ಪು ಒಬ್ಬ ಮುಸ್ಲಿಂ ರಾಜ. ಹಿಂದೂ–ಮುಸ್ಲಿಂ ಬಾಂಧವ್ಯಕ್ಕೆ ಪ್ರತೀಕವಾಗಿ ನಿಂತಿರುವುದು ಇದೆ. ಬ್ರಿಟಿಷರಿಗೆ ಟಿಪ್ಪು ಆಜನ್ಮ ವೈರಿಯಾಗಿದ್ದ. ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಭಾರತದಿಂದ ಕಿತ್ತೊಗೆಯಬೇಕೆಂಬ ಛಲ ಅವನಲ್ಲೂ ಇತ್ತು. ಹೀಗಾಗಿ ಬ್ರಿಟಿಷರು ಇವನನ್ನು ದ್ವೇಷಿಸುತ್ತಿದ್ದರು. ಬ್ರಿಟಿಷ್ ಇತಿಹಾಸಕಾರರ ಹೇಳಿಕೆಯ ಪ್ರಕಾರ ಈತನೊಬ್ಬ ಮತಾಂಧನೆಂದು ಅವನ ವಿರುದ್ಧ ಅನೇಕ ಟೀಕೆಗಳು ಕಂಡು ಬರುತ್ತವೆ. ಇದನ್ನೇ ಆಧಾರವಾಗಿಟ್ಟುಕೊಂಡು ಭಾರತದ ಇತಿಹಾಸಕಾರರಲ್ಲಿಯೂ ಟಿಪ್ಪುವಿನ ಬಗ್ಗೆ ನಕಾರಾತ್ಮಕವಾದ ಅಭಿಪ್ರಾಯಗಳಿವೆ. ಸಾಮ್ರಾಜ್ಯಶಾಹಿ ವಿರುದ್ಧ ಭಾರತದ ಅಸ್ಮಿತೆಯನ್ನು ರಕ್ಷಿಸಿದವನು ಟಿಪ್ಪು. ಸ್ವತಂತ್ರ ಕರ್ನಾಟಕದ ಹರಿಕಾರನೆಂದು ಅವನನ್ನು ಗುರುತಿಸಲಾಗುತ್ತದೆ.

ಇತಿಹಾಸದ ಇನ್ನೊಂದು ಮುಖವನ್ನು ಪರಿಚಯಿಸುವಾಗ ಮೌಖಿಕ ಪರಂಪರೆಗೆ ಸೇರಿದ ಜನಪದ ನಿರೂಪಣೆಯಿದೆ. ಜನಪದರು ನಮ್ಮ ಇತಿಹಾಸ, ಸಂಸ್ಕೃತಿಗಳ ಮೂಲವನ್ನು ಹುಡುಕುವಲ್ಲಿ ಅತ್ಯಂತ ವಿಶೇಷ ಸಹಕಾರ ನೀಡಿದವರು. ಇಂಥ ಪರಂಪರೆಯಲ್ಲಿ ಟಿಪ್ಪುವಿನ ಬಗ್ಗೆ ಕುತೂಹಲಕಾರಿಯಾದ ಅಂಶಗಳು ಇವೆ. ಮೈಸೂರು ಮತ್ತು ಶ್ರೀರಂಗಪಟ್ಟಣದ ಸಮೀಪದಲ್ಲಿ ಟಿಪ್ಪುವಿನ ಕುರಿತಾದ ಅನೇಕ ಲಾವಣಿಗಳು, ಕಥೆಗಳು ಪ್ರಚಲಿತದಲ್ಲಿವೆ. ಸಂತೆಯ ಮಾಳದಲ್ಲಿ, ಮೈಸೂರಿನ ಸಾರ್ವಜನಿಕ ಸ್ಥಳಗಳಾದ ಮಾರ್ಕೆಟ್, ಚೌಕ್ (ವೃತ್ತ) ಗಳಲ್ಲಿ

ಹಾಡುತ್ತಿದ್ದ ಅನಾಮಿಕ ಲಾವಣಿಕಾರರು ಟಿಪ್ಪುವಿನ ದುರಂತ ವೀರಗಾಥೆಯನ್ನು ಜನರಿಗೆ ಹೀಗೆ ಪರಿಚಯಿಸುತ್ತಿದ್ದರು:–

*ಬೇಷಕ್ ತಮಾಷಾ ಟೈಗರ್ ನಿಶಾನಾ*
*ಟಿಪ್ಪು ಸುಲ್ತಾನನ ಹೆಸರಾಯ್ತು*
*ಮಸಲತ್ ಮಾಡಿದ ಮೀರ ಸಾಧಕನಿಗೆ*
*ದೇಶ ದ್ರೋಹಿಯೆಂಬ ಹೆಸರಾಯ್ತು*

ಇಂಥ ಪಲ್ಲವಿ ಜನಪದರ ಬಾಯಲ್ಲಿ ಕೇಳಿ ಬರುತ್ತಿತ್ತು. ಕನ್ನಡದಲ್ಲಿ ಮೊಟ್ಟ ಮೊದಲು ಐತಿಹಾಸಿಕ ಲಾವಣಿಗಳನ್ನು ಸಂಪಾದಿಸಿದ ಫ್ಲೀಟ್ ಎಂಬ ಸಂಶೋಧಕ ಇಡೀ ರಾಜ್ಯ ಸುತ್ತಿ ಜನಪದ ಸಾಹಿತ್ಯ ಸಂಪಾದಿಸಿದ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಹೀಗೆ ಸಂಪಾದಿತ ಮಾಹಿತಿಯಲ್ಲಿ ಟಿಪ್ಪುವಿನ ಅನೇಕ ಲಾವಣಿಗಳಿವೆ. ಆದರೆ ಅವು ಅಚ್ಚಾಗದೇ ಇದ್ದದ್ದು ಆಶ್ಚರ್ಯಕರ. ದೇವುಡು ನರಸಿಂಹಶಾಸ್ತ್ರಿಯವರು "ಕರ್ನಾಟಕ ಸಂಸ್ಕೃತಿ" ಎಂಬ ಗ್ರಂಥದಲ್ಲಿ ಲಾವಣಿ ಬಗ್ಗೆ ಹೇಳುವಾಗ *ಬೇಷಕ್ ತಮಾಷಾ ಟೈಗರ್ ನಿಶಾನಾ* ಲಾವಣಿಯ ಸಾಲುಗಳನ್ನು ಉದಾಹರಿಸಿದ್ದಾರೆ. ಅದರಂತೆ ಜೀ. ಶಂ. ಪರಮಶಿವಯ್ಯನವರು ಟಿಪ್ಪುವಿನ ಲಾವಣಿಗಳ ಬಗ್ಗೆ ಹೇಳುವುದು ಹೀಗೆ:– "ಸುಪ್ರಸಿದ್ದ ಜನಪದ ಕಲಾವಿದ ದಿ॥ ಮಳವಳ್ಳಿ ರಾಚಯ್ಯನವರ ಪ್ರಕಾರ ಅವರ ಬಾಲ್ಯದಲ್ಲಿ ಟಿಪ್ಪು ಸುಲ್ತಾನ ಲಾವಣಿಯನ್ನು ಪೂರ್ಣವಾಗಿ ಹಾಡಲಾಗುತ್ತಿತ್ತು. ಆ ಲಾವಣಿಯನ್ನು ಹಾಡಿಸುವ ಸಂದರ್ಭಗಳು ಹೆಚ್ಚಾಗಿ ಒದಗಿ ಬರದೇ, ಪುಣ್ಯ ಸಂದರ್ಭಗಳಲ್ಲೆಲ್ಲ ಶಿವಕಥೆಗಳನ್ನು, ಪುಣ್ಯ ಪುರುಷರ ಕಥೆಗಳನ್ನು, ಶಿವಶರಣರ ಕಥೆಗಳನ್ನು ಹಾಡಿಸುವ ಸಂದರ್ಭ ಹೆಚ್ಚಾಗಿತ್ತು. ನೀಲಗಾರರು ತಮ್ಮ ಅಗತ್ಯಕ್ಕೆ ತಕ್ಕಂತೆ ಲಾವಣಿಗಳನ್ನು, ಕಾವ್ಯಗಳನ್ನು ಅಭ್ಯಾಸ ಮಾಡಿಕೊಂಡರು. ಟಿಪ್ಪುಸುಲ್ತಾನ ಲಾವಣಿ ಸಂಪೂರ್ಣವಾಗಿ ಮರೆತು ಹೋಯಿತು. ಅವರ ಈ ಅಭಿಪ್ರಾಯ ಸಮರ್ಥನೀಯವಾಗಿದೆ. ಅವರೇ ನೆನಪು ಮಾಡಿಕೊಂಡಂತೆ ಟಿಪ್ಪುಸುಲ್ತಾನ ಲಾವಣಿಯ ಕೆಲವು ಸಾಲುಗಳನ್ನು ಉಲ್ಲೇಖಿಸಲಾಗಿದೆ" ಇಂಥ ಅಭಿಪ್ರಾಯಗಳನ್ನು ಗಮನಾರ್ಹವಾಗಿ ಪರಿಗಣಿಸಬೇಕು. ಟಿಪ್ಪು ಸುಲ್ತಾನನ ಕುರಿತ ಲಾವಣಿಗಳಲ್ಲಿ '*ಮೈಸೂರು ಹುಲಿ ಟಿಪ್ಪು ಸುಲ್ತಾನನ ಲಾವಣಿ*'; '*ಟಿಪ್ಪು ಸುಲ್ತಾನ ಲಾವಣಿ*'; '*ಟಿಪ್ಪು ಸುಲ್ತಾನನ ಬೀಳಿನ ಹಾಡು*' ಮತ್ತು '*ಏನು ಮೋಸವಾಯಿತು*' ಇವುಗಳಲ್ಲಿ 'ಮೈಸೂರು ಹುಲಿ ಟಿಪ್ಪು ಸುಲ್ತಾನ' ಹಾಗೂ 'ಟಿಪ್ಪು ಸುಲ್ತಾನ' ಎಂಬ ಲಾವಣಿಗಳು ಸಮರ್ಥವಾಗಿವೆ. ಇವುಗಳನ್ನು ಕಟ್ಟಿದ ಲಾವಣಿಕಾರ ನೀಲಕಂಠ ಹೀಗೆ ಹೇಳುತ್ತಾನೆ:–

*ಶೇಷನ ಗಿರಿಹರಿದಾಸ ಪುಟ್ಟಣ್ಣನ*
*ಲೇಸಿನ ಕರುಣವು ನಮಗಾಯ್ತು*
*ಪೋಷಿತ ಶ್ರೀಗುರು ದಾಸ ನಂಜಣ್ಣನ*
*ಸುತ ನೀಲಕಂಠನ ಪದವಾಯ್ತು.*

ಟಿಪ್ಪು ಸುಲ್ತಾನ್ ಕುರಿತು ಇನ್ನೊಂದು ಲಾವಣಿಯನ್ನು ಹಾಡಿದವನು ರಾಜೋಜಿ. ಇದು "ಅಜಬ್ ತಮಾಶಾ ಈಸ್ಟ್ ಇಂಡಿಯಾ ಕಂಪೆನಿ" ಎಂದು ಆರಂಭಗೊಳ್ಳುತ್ತದೆ. ಮೈಸೂರು ಇತಿಹಾಸದ ಅಧ್ಯಯನಕ್ಕೆ ತೊಡಗಿದಾಗ ಹೈದರ್ ಬಿಟ್ಟು ಟಿಪ್ಪು, ಟಿಪ್ಪು ಬಿಟ್ಟು ಹೈದರ್ ಎಂದು ಅಧ್ಯಯನ ಮಾಡಿದರೆ ಅದು ಅಪೂರ್ಣ. ಇವರಿಬ್ಬರೂ ಒಬ್ಬರಿಗೊಬ್ಬರು ಪೂರಕ ಹಾಗೂ ತದ್ವಿರುದ್ಧವೂ ಹೌದು. ಇವರು ಮೈಸೂರಿನ ಲಾಂಛನ ಗಂಡಬೇರುಂಡ ಇದ್ದ ಹಾಗೆ. ಪ್ರಸ್ತುತ ನೀಲಕಂಠನ ಲಾವಣಿಯಲ್ಲಿ ಹೈದರ್‌ನ ಬೆಳವಣಿಗೆ, ಟಿಪ್ಪುವಿನ ವ್ಯಕ್ತಿತ್ವ ಮತ್ತು ಶ್ರೀರಂಗಪಟ್ಟಣದ ಯುದ್ಧಗಳ ಚಿತ್ರಣವಿದೆ. ಈ ಜೋಡಿ ಲಾವಣಿಗಳ ಕೇಂದ್ರ ಶ್ರೀರಂಗಪಟ್ಟಣದ ಕೊನೆಯ ಯುದ್ಧದ ಕಡೆಯ ದಿನದ ಹೋರಾಟ.

ಲಾವಣಿಯಲ್ಲಿ ಟಿಪ್ಪುವಿನ ದಿಗ್ವಿಜಯದ ಸಾಧನೆ ಹಾಗೂ ಮೈಸೂರಿನ ಸುತ್ತಮುತ್ತ ಇದ್ದ ವೈರಿಗಳಿಗೆ ಬಿಸಿ ಮುಟ್ಟಿಸಿ ದೂರದ ಲಂಡನ್ನಿಗೂ ಇವನ ಬೆದರಿಕೆ ಹರಡಿದ್ದು ವ್ಯಕ್ತವಾಗುತ್ತದೆ. ಟಿಪ್ಪುವಿನ ಶೌರ್ಯ, ಪರಾಕ್ರಮ, ದೇಶಭಕ್ತಿಗಳಿಂದ ಇಂಗ್ಲೀಷರು ಕಂಗಾಲಾಗಿ ಹೋದದ್ದು, ಅಲ್ಲದೆ ಈಸ್ಟ್ ಇಂಡಿಯಾ ಕಂಪನಿ ತತ್ತರಿಸಿ ಹೋದದ್ದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ್ದು, ಹೊರಗಿನ ಶತೃಗಳ ಮತ್ತು ಒಳಗಿನ ಹಿತಶತೃಗಳ ದಂಡು ನಂಬಿಕೆ ದ್ರೋಹ ಈ ಮುಂತಾದವುಗಳ ವರ್ಣನೆ ಲಾವಣಿಗಳಲ್ಲಿ ಕಣ್ಣು ಕಟ್ಟಿದ ಹಾಗೆ ಚಿತ್ರಿತವಾಗಿದೆ.

*ಕೋಟಲೆ ಹತ್ತಿದ ಬ್ರಿಟಿಷ್ ವರ್ತಕರು*
*ಕೂಟಗೈದರು ಮಸಲತ್ತನ್ನು*
*ಲೂಟಿಯನ್ನೊಡೆಯಲು ಶ್ರೀರಂಗಪಟ್ಟಣಕ್ಕೆ*
*ಜನರಲ್ ಹ್ಯಾರಿಸ್ ಬಂದಿದ್ದನು*

ಇಂತಹ ಸಂದರ್ಭದಲ್ಲಿ ಟಿಪ್ಪು ನಂಬಿದ್ದ ಅವನ ಸ್ವಂತ ಮಂತ್ರಿಗಳು ಅಧಿಕಾರಿಗಳು ಶತೃ ತೋರಿಸಿದ ಆಸೆ, ಆಮಿಷಕ್ಕೆ ಬಲೆ ಬಿದ್ದಿದ್ದರು. ಟಿಪ್ಪುವಿಗೆ ಮೋಸ ಮಾಡಲು ಸಂಚು ಹೂಡಲಾಗಿತ್ತು. ಈ ವಿಷಯವನ್ನು ಹಿ.ಮ. ನಾಗಯ್ಯನವರು ತಮ್ಮ "ಭವ್ಯ ಭಾರತ ಭಾಗ್ಯೋದಯ, ಸ್ವಾತಂತ್ರ್ಯ ಸಂಗ್ರಾಮ ಮಹಾಕಾವ್ಯ," ದಲ್ಲಿ ಟಿಪ್ಪುವಿನ ಅಂತ್ಯವನ್ನು ಹೀಗೆ ವರ್ಣಿಸಿದ್ದಾರೆ:–

ನಾಲ್ಕನೆಯ ಯುದ್ಧವದು ಮೇಲೇರಿ ಬಂತಕಟ
ಶಸ್ತ್ರಾಸ್ತ್ರದಲಿ ಗೆಲ್ಲದಾಗಿದ್ದ ಆಂಗ್ಲ ಪಡೆ
ಚಿನ್ನದಾಸೆಯ ತೋರಿ, ಹಣದಾಸೆಯನು ಬೀರಿ,
ಟಿಪ್ಪುವಿನ ಮಂತ್ರಿಗಳ ಕೊಂಡರದನೇನೆಂಬೆ !
ಮೋಸ ಮಾಡಿದರವರು, ಮಂತ್ರಿಗಳು, ಕುಹಕಿಗಳು;
ಕತ್ತ ಕೊಯ್ದರು ಒಳಗೆ; ಕ್ರೂರವಾಯಿತು ಘಳಿಗೆ !

ನಾಗಯ್ಯನವರು ಆಯ್ದು ಕೊಂಡದ್ದು ಸರಳ ಭಾಷೆ ಮತ್ತು ಕಾವ್ಯಾತ್ಮಕ ಶೈಲಿ. ಲಾವಣಿಕಾರರು ತಮ್ಮ ಲಾವಣಿಗಳಲ್ಲಿ ಇದನ್ನು ಹೀಗೆ ವಿವರಿಸಿದ್ದಾರೆ.

*ಮೀರ ಸಾಧಕನಾಟ ಇಂಪಿನಾಟಕವೇ ಆಗಿದ್ದಿತು*
*ದಾರಿ ತೋರಿತು ವೈರಿ ಜನರಿಗೆ ಭಾರೀ ಕಷ್ಟವೇ ತಪ್ಪಿತ್ತು*
*ಖಾಸಾ ದಂಡಿನ ಶ್ರೇಷ್ಠ ಮುಖಂಡರ*
*ಮೋಸವು ಸುಲ್ತಾನರಿಗೆ ಅರಿವಾಯ್ತು*
*ಮಸಲತ್ ಮಾಡಿದ ಮೀರ ಸಾಧಕನಿಗೆ*
*ದೇಶದ್ರೋಹಿ ಎಂಬ್ಹೆಸರಾಯ್ತು*

ಮೀರಸಾಧಕ ಮೈಸೂರಿನ ಜನರ ಕಣ್ಣಲ್ಲಿ ಸೈತಾನನ ಪ್ರತಿರೂಪ. ವಂಚಕ, ಮೋಸಗಾರನಾಗಿದ್ದ. ಲಾವಣಿಕಾರರಿಗೆ ಮೀರಸಾಧಕ ದೇಶದ್ರೋಹಿಯಾದರೆ ಟಿಪ್ಪು ಅದನ್ನು ಬಗ್ಗು ಬಡಿಯುವ ಮೈಸೂರಿನ ಹುಲಿಯಾದ. ಮೀರಸಾಧಕನ ಕಡು ದ್ರೋಹದಿಂದ ಮದ್ದಿನ ಮನೆ ಉರಿದು, ಇಡಿಸಿದ್ದ ಫಿರಂಗಿಯೇ ಇಳಿದ್ಹೋಯ್ತು ಮಣ್ಣಿನೊಳಗೆ. ತನ್ನ ಹಿತಶತೃಗಳ ಮೋಸದಿಂದ ಶತೃ ಸೈನ್ಯ ಕೋಟೆ ಹೊಕ್ಕಿತು. ಸೈನಿಕರ ಹತ್ಯೆಯಾಯಿತು. ಅಂಥ ಸಮಯದಲ್ಲಿ ಟಿಪ್ಪು ಏನಾದ? ಆತ ತಪ್ಪಿಸಿಕೊಳ್ಳಲು ಓಡಿ ಹೋದನೇ? ಟಿಪ್ಪು ಒಬ್ಬ ಹೇಡಿಯೇ ? ಎಂಬ ಚರಿತ್ರಕಾರರ ಪ್ರಶ್ನೆಗಳಿಗೆ ಲಾವಣಿಗಳು ಉತ್ತರಿಸುತ್ತವೆ.

*ಹರಾಮಕೋರರ ಕರಾಮತ್ ಅರಿತನು*
*ಟಿಪ್ಪು ಸುಲ್ತಾನನು ನಿಮಿಷದಲಿ*
*ಅರೆ ಹಮಾರೇ ನಮಕ್ ಹರಾಮ್*
*ಕರೇಸೋ ತಾನಂದ ಮನಸಿನಲಿ*
*ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ*
*ರಣಾಗ್ರ ಹೊರಟನು ರೋಷದಲಿ*
*ಫಿರಂಗಿ ಸೋಲ್ಜರ್ ತರಂಗ ಮಧ್ಯದಿ*
*ತುರಂಗ ಬಿಟ್ಟನು ತ್ವರಿತದಲಿ*

1799ರಲ್ಲಿ ಬ್ರಿಟಿಷರ ವಿರುದ್ಧ ಕಟ್ಟಕಡೆಯದಾಗಿ ರಣರಂಗಕ್ಕಿಳಿದ ಟಿಪ್ಪು ಕುರಿಗಳ ಹಾಗೆ ಶತೃ ಸೈನ್ಯವನ್ನು ಕೊಚ್ಚಿ ಹಾಕಿದ. ಇವನ ಶೌರ್ಯ ಪರಾಕ್ರಮ ಕಂಡ ಜನರಲ್ ಹ್ಯಾರಿಸ್‌ಗೆ ಚಿಂತೆಯಾಯಿತು. ಅವನನ್ನು ಸೆರೆ ಹಿಡಿಯಬೇಕೆಂಬ ಆದೇಶ ಹ್ಯಾರಿಸ್‌ನಿಗಿತ್ತು. ಆದರೆ ಸೆರೆ

ಹಿಡಿಯುವುದಿರಲಿ, ಅವನ ಸಮೀಪಕ್ಕು ಸುಳಿಯುವುದು ಅಸಾಧ್ಯವಾಯಿತು. ಆಗ ಬೇರೆ ದಾರಿ ಕಾಣದೆ ಹ್ಯಾರಿಸ್ ಟಿಪ್ಪುವಿನ ಮೇಲೆ ಗುಂಡು ಹಾರಿಸಲು ಅಪ್ಪಣೆ ನೀಡಿದ. ಅದರ ಫಲವಾಗಿ

ಪರಾಕ್ರಮದಿ ಬಲು ಹೋರಾಡಿ ಬಿದ್ದನು
ಸಾರಂಗ ಬಾಗಿಲ ಗವಿಯ ಬಳಿ
ಫರಂಗಿ ಫೌಜಿನ ತುರಂಗ ನುಗ್ಗಿತು
ಶ್ರೀರಂಗಧಾಮನ ಪಟ್ಟಣದಲಿ

ಹೀಗೆ ಟಿಪ್ಪು ಸುಲ್ತಾನನ ಹದಿನೇಳು ವರ್ಷದ ಆಡಳಿತ ಅಂತ್ಯವಾಯಿತು. ಟಿಪ್ಪುವಿನ ಆಡಳಿತದ ಕುರಿತು ಲಾವಣಿಕಾರ

*ಟಿಪ್ಪು ರಾಜ್ಯದೊಳು ಶರಾಬಿ, ಸೇಂದಿ,*
*ಗಾಂಜಾ, ಅಫೀಮು ಇರಲಿಲ್ಲ*
*ಟಿಪ್ಪುವಿನ ಕಾಲದೊಳು ಜೂಜಿನಾಟ*
*ಮೇಣ್ ವ್ಯಭಿಚಾರದ ಸುಳಿವಿಲ್ಲ*
*ಜ್ಞಾಪಕವಿದ್ದಿತು ಸಬ್ಬಲ್ ರಾಣಿಯ*
*ದಿಣ್ಣೆಯ ಭೀತಿಯು ಜನಕೆಲ್ಲ.*

ಮೈಸೂರು ಹುಲಿ ಟಿಪ್ಪು ಮಡಿದ ಮೇಲೆ ಪ್ರಳಯದಂಥ ಮಳೆಯಾಯಿತಂತೆ. ಇದನ್ನು ಲಾವಣಿಕಾರ ವಿಷಾದದಿಂದ ಹೀಗೆ ಹೇಳುತ್ತಾನೆ:–

*ಹುಲಿ ಸೀಳಿದ ದೊರೆ ಅಳಿದೋದ*
*ಮೇಲೆ ರಣದಲ್ಲಿ*
*ಮಳೆಯಾಯಿತು ಘಳಿಗೇಲಿ ಪ್ರಳಯದಂತೆ ಭರದಲಿ*
*ಸುಲಿಗೆಯಾ ಮಾಡಿದರು ಶತೃ*
*ಜನರು ಪುರದಲಿ*
*ಬಳಿಕಾದ ವಿವರ ಬರೆದೇನು*
*ಇಲ್ಲಿ ಫಲವಿಲ್ಲ*

ಈ ಎರಡು ಲಾವಣಿಗಳಲ್ಲಿ ರಾಜೋಜಿಯ ಲಾವಣಿ ಹೆಚ್ಚು ವಿವರಗಳನ್ನೊಳಗೊಂಡು ಭಾವತೀವ್ರತೆಯಿಂದ ಕೂಡಿದೆ. ಯುದ್ಧದ ವರ್ಣನೆ, ಟಿಪ್ಪುವಿನ ವ್ಯಕ್ತಿತ್ವ, ಮತ ಧರ್ಮ ಸಹಿಷ್ಣುತಾ ಭಾವನೆ ಅತಿ ದೊಡ್ಡ ಪ್ರಮಾಣದಲ್ಲಿ ವ್ಯಕ್ತವಾಗಿದೆ. ಟಿಪ್ಪುವಿನ ಹಿಂದು–ಮುಸ್ಲಿಂ ಸೌಹಾರ್ದ ಭಾವನೆಗೆ ಇಂಥ ಲಾವಣಿಗಳು ದಾಖಲೆಗಳಾಗಿ ನಿಂತಿವೆ.

ಯುದ್ಧದ ಪ್ರಸಂಗ ಮತ್ತು ಟಿಪ್ಪುವಿನ ಸಾವಿನ ಚಿತ್ರಣವು ಅತ್ಯಂತ ಪ್ರಭಾವಯುತವಾಗಿ ಲಾವಣಿಗಳಲ್ಲಿ ಹೆಣೆಯಲಾಗಿದೆ. ಯುದ್ಧದ ಅಂತಿಮ ಘಟ್ಟದಲ್ಲಿ ಬ್ರಿಟಿಷ್ ಸೇನೆ ಕೋಟೆಯೊಳಗೆ ನುಗ್ಗಿದಾಗ ಟಿಪ್ಪು ರಂಗಮಹಲ್‌ನಲ್ಲಿರುತ್ತಾನೆ. ಆಗ ಅವನ ಸೇನಾನಿ ಸೈಯದ್ ಗಫೂರ್‌ನು ಯುದ್ಧದಲ್ಲಿ ಮಡಿದ ಸುದ್ದಿ ತಿಳಿಯುತ್ತದೆ. ತನ್ನ ರಾಜ್ಯದಲ್ಲಿದ್ದ ಹಿತಶತೃಗಳ ಬಗ್ಗೆ ತಿಳಿದು ಕೂಡಲೇ ಅಂತಃಪುರದಲ್ಲಿದ್ದ ಸ್ತ್ರೀಯರಿಗೆಲ್ಲ ಹೊರಡುವಂತೆ ಸೂಚಿಸಿ ತನ್ನ ಕುದುರೆ ಹತ್ತಿ ಟಿಪ್ಪು ಸೈನ್ಯದ ಮಧ್ಯೆ ನುಗ್ಗುತ್ತಾನೆ.

*ಹತ್ತಿ ಕುದುರೆ ಮೇಲೆ ಕತ್ತರಿಸಿದನು*
*ಲೆಕ್ಕವಿಲ್ಲ ಸೋಜರ ಕತ್ತು*
*ಕಡಿದನು ಸಾವಿರ ಕಾಲಾಳುಗಳ*
*ರಕ್ತ ಹರಿಯುತ್ತಿದೆ ನದಿಯೊಳಗೆ*

ಹೀಗೆ ಯುದ್ಧವನ್ನು ವಿವರಿಸುತ್ತ ಲಾವಣಿ ಟಿಪ್ಪುವಿನ ವರ್ಣನೆ ಮಾಡುತ್ತದೆ.

*ರತ್ನದ ಕಂಠಿ, ಚಿನ್ನದ ಕತ್ತಿ*
*ವಜ್ರದ ಕಲ್ಗಿ ಶಿರದ ಮ್ಯಾಗ*
*ಇಳಿದನು ಕುದುರೆಯು ಸುಸ್ತಾಗಿ ರಾಜ*
*ಮಲಗಿಕೊಂಡ ಹುಲ್ಲೇ ಗವಿಯೊಳಗೆ*
*ಅಂಗಕೆ ಗೋಲಿಯು ಕಂಗೊಳಿಸಿ ತಗಲಿರೆ*
*ಕಂಗೆಟ್ಟು ಟಿಪ್ಪು ಸುಸ್ತಾಗಿ*
*ತನ್ನವರ್‍ಯಾರಿಲ್ಲ ತಗುಲಿದೆ ಗುಂಡು*
*ತಳಮಳಗೊಳ್ಳುವ ನೆರಳೊಳಗೆ*

ಅಷ್ಟರೊಳಗೆ ಒಬ್ಬ ಬ್ರಿಟಿಷ್ ಸಿಪಾಯಿ ಯಾರೋ ವಜೀರ್ ಮಡಿದಿರಬೇಕೆಂದು ಭಾವಿಸಿ ರತ್ನಖಚಿತ ಖಡ್ಗವನ್ನು ತೆಗೆದುಕೊಳ್ಳಲು ಕೈಹಾಕಿದಾಗ ಟಿಪ್ಪು ಹೇಗೆ ರೌದ್ರಾವತಾರ ತಾಳಿದನೆಂಬುದನ್ನು ಲಾವಣಿಕಾರ ಹೀಗೆ ಹೇಳುತ್ತಾನೆ;–

*ನೇತ್ರವ ಬಿಟ್ಟು ರೌದ್ರಾಕಾರದಿ*
*ಕತ್ತರಿಸಿದ ಸೋಲ್ಜರ ಕೈಗೆ*
*ಕಡಿದ ತಕ್ಷಣ ಕರವೂ ಬಿದ್ದಿತು*
*ಕುಣಿಯುತಿತ್ತು ಕೀಲು ಬೊಂಬೆಯಂಗೆ*
*ಆಗ ಆ ಸಿಪಾಯಿ ಕಡು ಕೋಪದಿಂದ*
*ಹೊಡೆದನು ಗೋಲಿಯ ದೊರೆಯ ಮೈಗೆ*

ಹೀಗೆ ಟಿಪ್ಪುವಿನ ದುರಂತವಾಯಿತು. ಟಿಪ್ಪು ಸತ್ತ ಸುದ್ದಿ ಕೇಳಿ ಅವನ ಶವ ಶತೃಗಳಿಗೆ ಸಿಗಬಾರದೆಂದು ಟಿಪ್ಪುವಿನ ಸೈನಿಕರು ಅವನ ಶವದ ಮೇಲೆ ಅನೇಕ ಹೆಣಗಳ ರಾಶಿಯನ್ನೇ ಹಾಕಿದರಂತೆ. ಅನಂತರ ಹ್ಯಾರಿಸ್ ಟಿಪ್ಪುವಿನ ಮಕ್ಕಳಿಗೆ ತಂದೆಯ ಹೆಣ ಹುಡುಕಲು ಕರೆತರುತ್ತಾನೆ. ಕೊನೆಗೆ ಟಿಪ್ಪುವಿನ ಹೆಣ ಸಿಗುತ್ತದೆ. ಗೋಳಾಡುವ ಮಕ್ಕಳಿಗೆ ಹ್ಯಾರಿಸ್

ಚಿಂತಿ ಯಾಕ ನಿಮ್ಮ ಮನದಲ್ಲಿ,
ಪಟ್ಟವ ನಿಮಗೇ ಕಟ್ಟಿ ಕೊಡುವೆನು.
ಸತ್ಯವಾಗಿರಿ ನೀವು ನಮ್ಮಲ್ಲಿ

ಎಂದು ಹೇಳಿದ ಎಂದು ಲಾವಣಿಕಾರರು ಪದ ಕಟ್ಟಿ ಹಾಡಿದ್ದಾರೆ. ಒಟ್ಟಾರೆ ಬ್ರಿಟಿಷರು ಟಿಪ್ಪುವಿನ ಮಕ್ಕಳೊಂದಿಗೆ ನಡೆದುಕೊಂಡ ರೀತಿ ಇತಿಹಾಸದಲ್ಲಿ ದಾಖಲಾಗಿದೆ. ಕೋಲ್ಕತ್ತಾದ ಕೊಳಚೆ ಪ್ರದೇಶದಲ್ಲಿ ಅವರನ್ನು ಅನಾಥರಾಗಿ ತಳ್ಳಿ ಅವರ ಸಂತತಿಯವರು ಅವರ ಹಕ್ಕಿಗೆ ಹೋರಾಡುವಂತೆ ಮಾಡಿದ್ದೂ ಇದೆ. ಲಾವಣಿ ಸಾಹಿತ್ಯವು ಇತಿಹಾಸಕ್ಕೆ ಪೂರಕವಾಗಿ ಹಲವಾರು ಮಾಹಿತಿಗಳನ್ನೊದಗಿಸುತ್ತವೆ. ಅವುಗಳಲ್ಲಿನ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಇತಿಹಾಸದ ದಾಖಲೆಗಳೊಂದಿಗೆ ತಾಳೆ ನೋಡುವುದು ಸಂಶೋಧಕನ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಸಾಹಿತ್ಯ ಮತ್ತು ಇತಿಹಾಸಗಳು ಅವಿನಾಭಾವ ಸಂಬಂಧ ಹೊಂದಿರುವುದರ ಅಗತ್ಯವೂ ಇದೆ.

**ಲಾವಣಿ**

ಆಲಿಸಿ ಪಾಲಿಸಿ ಕೇಳಿರಿ ಜನರೆ
ಕನ್ನಡ ನಾಡಿನ ಕಥೆಯೊಂದ
ಮೈಸೂರು ಹುಲಿಯೆಂದು ಹೆಸರು ಪಡೆದ
ನಮ್ಮ ಟಿಪ್ಪು ಸುಲ್ತಾನ ಕಥೆಯೊಂದ

1750 ಇಸವಿ ನವೆಂಬರ್ 10
ದೇವನಹಳ್ಳಿಯಲ್ಲಿ ಜನಿಸಿದನು
ಹೈದರಾಲಿಯ ಮಗನ ಹೆಸರ
ಟಿಪುಸುಲ್ತಾನ ಎಂದೇ ಕಟ್ಟಿದನು

ಕುದುರೆ ಸವಾರಿ ಶಸ್ತ್ರಾಸ್ತ್ರಗಳ
ಯುದ್ಧ ವಿದ್ಯೆಗಳ ಕಲಿಸಿದರು
ಪರ್ಷಿಯನ್: ಫ್ರೆಂಚ್, ಇಂಗ್ಲೀಷ್ ಭಾಷೆ
ಟಿಪ್ಪುಸುಲ್ತಾನ ಕಲಿತವನು

ಗ್ರಂಥಾಲಯಗಳ ಎಲ್ಲ ಕಡೆಯು
ಸ್ಥಾಪಿಸಲ್ಪಟ್ಟವನು
ಅಮೆರಿಕ ಸ್ವಾತಂತ್ರ್ಯ ಹೋರಾಟದಲ್ಲಿ
ಅನುಕಂಪ ಉಳ್ಳವನಾದವನು

ಹದಿನೈದರ ಹರೆಯ ಟಿಪ್ಪುಸುಲ್ತಾನ್
ಮರಾಠರೊಡನೆ ಯುದ್ಧ ಮಾಡಿದನು
1782ರಲ್ಲಿ ಸೈನ್ಯ ನಡೆಸಿ
ಬ್ರಿಟಿಷರನ್ನು ಸೋಲಿಸಿದ

1784ರಲ್ಲಿ ಮಂಗಳೂರು ಒಪ್ಪಂದ
ಮಾಡಿದನು
ಪಶ್ಚಿಮ ಕರಾವಳಿ ಪರದೇಶವಲ್ಲದೆ
ಆರ್ಕಾಟನ್ನು ವಶಪಡಿಸಿಕೊಂಡು

ಮಂಗಳೂರಿನ ಒಪ್ಪಂದವೇ
ಭಾರತ ಬ್ರಿಟಿಷ್ ಇತಿಹಾಸದಲ್ಲಿ
ಪ್ರಮುಖ ಘಟನೆಯಾಗಿದೆ
ಎಂದೆಂದು ಮರೆಯದಂತಾಗಿದೆ

1786ರಲ್ಲಿ ಮೈಸೂರು–ಮರಾಠ
ಯುದ್ಧದಲ್ಲಿ ಬದಾಮಿಯನ್ನು ಕಸಿದು ಕೊಂಡು
ಟಿಪ್ಪುಸುಲ್ತಾನ್ ನಿಜಾಮನಿಂದ
ಅದೋನಿಯನ್ನು ಕಸಿದುಕೊಂಡನು

1786ರಲ್ಲಿ ಗಜೇಂದ್ರಗಡದಲ್ಲಿ
ಮರಾಠರೊಡನೆ ಒಪ್ಪಂದ
ಧಾರವಾಡ ಮತ್ತು ಕಿತ್ತೂರನ್ನು
ಟಿಪ್ಪು ಸುಲ್ತಾನ್‌ಗೆ ಸೇರಿಸಲಾಯ್ತು

1784ರಲ್ಲಿ ಟರ್ಕಿ ಸುಲ್ತಾನಗೆ
ನಿಯೋಗ ಒಂದನ್ನು ಕಳಿಸಿದನು
ಬ್ರಿಟಿಷರನ್ನು ಹೊಡೆದೋಡಿಸಲು
ಅವನ ಬೆಂಬಲ ಕೋರಿದನು

ಇಂಗ್ಲೀಷ್ ಕಂಪನಿ ಆಶ್ರಯದಲ್ಲಿದ್ದ
ತಿರುವಾಂಕೂರಿನ ರಾಜನ ಮೇಲೆ
ಟಿಪ್ಪು ಯುದ್ಧಕ್ಕೆ ಸಾರಿದನು
ಈ ಹಿಂದೆ ಡಚ್ಚರು ಮತ್ತು
ತಿರುವಾಂಕೂರಿನ ಮಧ್ಯಸ್ತಿಕೆಯನ್ನು
ವಹಿಸಿಕೊಂಡಿದ್ದನು

ಕಾರನ್ವಾಲಿಸ್ ಟಿಪ್ಪುವಿನ ಮೇಲೆ
ಯುದ್ಧವನ್ನು ಸಾರಿದನು
ಮರಾಠ ಮತ್ತು ಹೈದ್ರಾಬಾದ್ ನಿಜಾಮನು
ಬ್ರಿಟಿಷರ ಪರ ವಹಿಸಿದನು

1791ರಲ್ಲಿ ಬೆಂಗಳೂರು ಇಂಗ್ಲಿಷರ
ವಶವಾಯ್ತು
1792ರಲ್ಲಿ ಟಿಪ್ಪು ಪೂರ್ತಿ ಪರಾಜಿತನಾಗಿ
ಶ್ರೀರಂಗಪಟ್ಟಣ ಒಪ್ಪಂದಕೆ ಸಹಿಮಾಡಿದನು

ದಕ್ಷಿಣ ಭಾಗದ ಅರ್ಧರಾಜ್ಯವ
ಶತ್ರುಗಳಿಗೆ ಬಿಟ್ಟು ಕೊಡಬೇಕಾಯ್ತು
ಇದಲ್ಲದೆ ಯುದ್ಧ ಖರ್ಚಿಗಾಗಿ
ಮೂರು ಕೋಟಿ ರೂಪಾಯಿ ಬೇಕಿತ್ತು
ಇದಕ್ಕೋಸ್ಕರ ಇಬ್ಬರ ಮಕ್ಕಳನ್ನು
ಬ್ರಿಟಿಷರಿಗೆ ಅಡವಿಡಬೇಕಾಯ್ತು

ಮೂರನೆ ಮೈಸೂರು ಮಹಾಯುದ್ಧದಲಿ
ಟಿಪ್ಪುವಿಗೆ ಅವಮಾನವಾಯ್ತು
ಬ್ರಿಟಿಷರನ್ನ ಓಡಿಸಬೇಕೆಂಬ
ದೃಢ ಸಂಕಲ್ಪ ಹೆಚ್ಚಾಯ್ತು

ಸಿದ್ದೇಶ್ವರ ಮತ್ತು ಮಳವಳ್ಳಿ ಬಳಿ
ಕದನದಲ್ಲಿ ಸೋತು ಇವನು
ಶ್ರೀರಂಗಪಟ್ಟಣ ಸೇರಿಕೊಂಡನು

ಗೌರ್ನರ್ ವೆಲ್ಲೆಸ್ಲಿ ಕಾಲದಲ್ಲಿ
ನಾಲ್ಕನೇ ಮೈಸೂರ್ ಯುದ್ಧ ಶುರುವಾಯ್ತು
ಅಧಿಕ ಗುಂಡನ ಸುರಿಮಳೆ ಸುರಿಸಿ
ಹ್ಯಾರಿಸ್ ಶ್ರೀರಂಗಪಟ್ಟಣ ನುಗ್ಗಿದನು

ಮಧ್ಯಾಹ್ನ ಒಂದು ಗಂಟೆಯಲ್ಲಿ
ನಗರ ಪ್ರವೇಶ ಮಾಡಿದನು
1799 ಮೇ 4 ರಂದು
ಬ್ರಿಟಿಷರ ವಿರುದ್ಧ ಹೋರಾಡುತ್ತಲೆ
ಟಿಪ್ಪು ಹುಲಿ ಎಂದೆನಿಸಿಕೊಂಡು
ಹೋರಾಡುತ್ತಲೇ ಮರಣ ಹೊಂದಿದನು

**ಗ್ರಂಥಋಣ**


1. ಲಿಂಗದೇವರು ಹಳೆಮನಿ, **ಧೀರ ಟೀಪುವಿನ ಲಾವಣಿಗಳು**, ವಿಸ್ಮಯ ಪ್ರಕಾಶನ, ಮೈಸೂರು, 2009
2. **ಕರ್ನಾಟಕ ಪರಂಪರೆ**, ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
3. ಬಸವರಾಜ ಮಲಶೆಟ್ಟಿ, **ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998
4. ದೇವರ ಕೊಂಡಾರೆಡ್ಡಿ ಮತ್ತು ದೇವರಾಜಸ್ವಾಮಿ ಜಿ.ಕೆ, (ಸಂ) **ಇತಿಹಾಸ ದರ್ಶನ** ಸಂಪುಟ 29, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2014
5. ಶ್ರೀಕಂಠ ಕೂಡಿಗೆ, **ಕನ್ನಡ ಲಾವಣಿ ಸಾಹಿತ್ಯ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1999
6. ಶಿವಗಜ್ರಾನಿ ಮತ್ತು ಎಸ್.ರಾಮ್, **ಟಿಪು ಸುಲ್ತಾನ್** (1750–1799), ಕಾಮನ್‌ವೆಲ್ತ್ ಪಬ್ಲಿಷರ್ಸ್ ಪ್ರೈ.ಲಿ, ನವದೆಹಲಿ, 2011
7. ಹರಿಶ್ಚಂದ್ರ ದಿಗ್ಸಂಗಿಕರ್, **ಲಾವಣಿ, ಸವಾಲ್–ಜವಾಬ್ ಪದಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005
8. ನಾಗಯ್ಯ ಹಿ.ಮ, **ಭವ್ಯ ಭಾರತ ಭಾಗ್ಯೋದಯ**, ಸ್ವಾತಂತ್ರ್ಯ ಸಂಗ್ರಾಮ ಮಹಾಕಾವ್ಯ, ಸುವರ್ಣ ಪ್ರಕಾಶನ, ಬೆಂಗಳೂರು, 1993, ಪು 1076–78
9. ಪ್ರೊ. ಜಿ.ಎಸ್.ಮಲ್ಲಪ್ಪ (ಸಂ)., **ಜನಪದ ಗೀತೆಗಳು**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, 2012, ಪು. 29–33